# ಗೂಗಲ್ ಖಾತೆ ಸ್ಟೋರೇಜ್ ತುಂಬಿದೆಯೆ?



ಜಿ ಮೇಲ್ ಬಹುತೇಕರ ಗೂಗಲ್ ಖಾತೆಯೂ ಹೌದು. ಇದರ ಸ್ಟೋರೇಜ್ ಭರ್ತಿಯಾಗುವುದು ಸಹಜ. ಭರ್ತಿಯಾದ ಸ್ಟೋರೇಜ್ ಕಡಿಮೆ ಮಾಡುವ ಸರಳ ವಿಧಾನವೇ ಡಿಲೀಟ್ ಮಾಡುವುದು. ಈ ಅಸ್ತ್ರ ಬಳಸದೇ ಸ್ಟೋರೇಜ್ ಗಾತ್ರ ಕುಗ್ಗಿಸಬೇಕೆ?

**■ ಶಶಿಕುಮಾರ್ ಸಿ.**

ಜಿಮೇಲ್, ಫೋಟೊಸ್ ಸೇರಿದಂತೆ ಇನ್ನಿತರ ಫೈಲ್‌ಗಳನ್ನು ಡಿಲೀಟ್ ಮಾಡದೆ, ಭರ್ತಿಯಾದ ಗೂಗಲ್ ಅಕೌಂಟ್‌ನ ಸ್ಟೋರೇಜ್ ಗಾತ್ರವನ್ನು ಕುಗ್ಗಿಸುವ ಸರಳ ವಿಧಾನವೆಂದರೆ ಅದು 'ಟೇಕ್‌ಔಟ್' ಆಯ್ಕೆ. ಈ ಆಯ್ಕೆಯ ಬಗ್ಗೆ ಅಷ್ಟಾಗಿ ಬಹುತೇಕರಿಗೆ ಗೊತ್ತಿಲ್ಲವಾದರೂ ಹೆಚ್ಚು ಉಪಯುಕ್ತ.

'ಯುವರ್ ಅಕೌಂಟ್ ಯುವರ್ ಡಾಟ' ಘೋಷವಾಕ್ಯದ ಈ ಆಯ್ಕೆಯು ನಿಮ್ಮ ಗೂಗಲ್ ಖಾತೆಯ ಎಲ್ಲ ಮಾದರಿಯ ಕಂಟೆಂಟ್ ಅಥವಾ ಫೈಲ್‌ಗಳನ್ನು ಸುಲಭವಾಗಿ ಬ್ಯಾಕ್‌ಅಪ್ ಫೈಲಾಗಿ ಬದಲಾಯಿಸಿ ನಿಮ್ಮದೇ ಜಿ ಮೇಲ್ ಖಾತೆಗೆ ಕ್ಷಣಾರ್ಧದಲ್ಲಿ ರವಾನಿಸುತ್ತದೆ.

ಬ್ಯಾಕ್‌ಅಪ್ ಫೈಲ್ ನಿಮ್ಮ ಜಿ ಮೇಲ್‌ಗೆ ಬಂದ ಬಳಿಕ ಗೂಗಲ್ ಅಕೌಂಟ್‌ನ ಎಲ್ಲ ಡಾಟಾವನ್ನು ಡಿಲೀಟ್ ಮಾಡಿ ಭರ್ತಿಯಾದ ಸ್ಟೋರೇಜ್ ಗಾತ್ರವನ್ನು ಕುಗ್ಗಿಸಬಹುದು. ಅಗತ್ಯಬಿದ್ದಾಗ, ಜಿ ಮೇಲ್‌ಗೆ ಬಂದ ಬ್ಯಾಕ್‌ಅಪ್ ಫೈಲ್ ತೆರೆದು ಮಾಹಿತಿ ಬಳಸಿಕೊಳ್ಳಬಹುದು.

ಇನ್ನು ಜಿ ಮೇಲ್‌ಗೆ ಬಂದ ಫೈಲ್ ತೆರೆದರೆ ನಿಮ್ಮ ಡಾಟವು ಜಿಪ್ ಫೈಲ್ ಆಗಿ ಕಾಣಿಸುತ್ತದೆ. ಇದನ್ನು ಜಿ ಮೇಲ್‌ನಲ್ಲೇ ಇಟ್ಟುಕೊಂಡು ಭವಿಷ್ಯದಲ್ಲಿ ನಿಮಗೆ ಅಗತ್ಯವಾದಾಗ ಬಳಸಿಕೊಳ್ಳಬಹುದು. ಇಲ್ಲವಾದರೆ ಅದರಲ್ಲಿನ ಬ್ಯಾಕ್‌ಅಪ್ ಫೈಲ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಮೇಲ್ ಡಿಲೀಟ್ ಮಾಡಬಹುದು. ಇದರಿಂದ ಗೂಗಲ್ ಖಾತೆಗೆ ಸ್ಟೋರೇಜ್ ಹೊರೆಯಾಗದು. ಡಿಲೀಟ್ ಹೊರತಾಗಿ ಸ್ಟೋರೇಜ್ ಸಮಸ್ಯೆಯನ್ನು ಬಗೆಹರಿಸುವ ಅತ್ಯಂತ ಸುಲಭ ಹಾಗೂ ಸೂಕ್ತ ವಿಧಾನವಿದು.



## ಆಯ್ಕೆ ವಿಧಾನ ಹೇಗೆ?

ಗೂಗಲ್ ಕ್ರೋಮ್‌ನಲ್ಲಿ 'takeout.google.com' ಎಂದು ಟೈಪಿಸಿದರೆ ಗೂಗಲ್ ಪೇಜೊಂದು ತೆರೆದುಕೊಳ್ಳುತ್ತದೆ. ಇದು ಗೂಗಲ್ ಖಾತೆಯ ಭಾಗವಾಗಿದ್ದು, ಅಷ್ಟಾಗಿ ಹೆಚ್ಚಿನವರಿಗೆ ತಿಳಿದಿಲ್ಲ. ಅದನ್ನು ಕ್ಲಿಕ್ಕಿಸಿದೊಡನೆ 'ಕ್ರಿಯೇಟ್ ಎ ನ್ಯೂ ಎಕ್ಸ್‌ಪೋರ್ಟ್' ಎಂದು ಕಾಣಿಸಿಕೊಳ್ಳುತ್ತದೆ. ಅದರಡಿ 'ಸೆಲೆಕ್ಟ್ ಡಾಟ ಟು ಇನ್‌ಕ್ಲೂಡ್' ಮತ್ತು 'ಚೂಸ್ ಫೈಲ್ ಟೈಪ್, ಫ್ರೀಕ್ವೆನ್ಸಿ ಮತ್ತು ಡೆಸ್ಟಿನೇಷನ್' ಎಂಬ ಎರಡು ಉಪ ಆಯ್ಕೆಗಳು ಕಾಣುತ್ತವೆ. ಆ ಪೈಕಿ ಮೊದಲನೆಯದ್ದನ್ನು ಕ್ಲಿಕ್ಕಿಸಬೇಕು.

ಹಾಗೆ ಮಾಡಿದ ನಂತರ, ಗೂಗಲ್ ಅಕೌಂಟ್‌ನಲ್ಲಿ ಲಭ್ಯವಿರುವ ಎಲ್ಲ ಮಾದರಿಯ ಫೈಲ್‌ಗಳು ಅಥವಾ ಗೂಗಲ್‌ನ ಎಲ್ಲ ಉತ್ಪನ್ನಗಳ ಬ್ಯಾಕ್‌ಅಪ್ ಫೈಲ್‌ಗಳು ಪ್ರತ್ಯೇಕವಾಗಿ ಕಾಣುತ್ತವೆ. ಆ ಪೈಕಿ ನಿಮಗೆ ಅತ್ಯಗತ್ಯವಾದ (ಜಿ ಮೇಲ್, ಡ್ರೈವ್, ಫೋಟೊಸ್ ಇತ್ಯಾದಿ) ಫೈಲ್‌ಗಳು ಪ್ರತ್ಯೇಕವಾಗಿ ಕಾಣುತ್ತವೆ. ಅವುಗಳೆಲ್ಲವನ್ನು ಡೀಸೆಲೆಕ್ಟ್ ಮಾಡಿ. ನಂತರ ಅಗತ್ಯವಾದ ಫೈಲ್‌ಗಳನ್ನು ಮಾತ್ರ ಸೆಲೆಕ್ಟ್ ಮಾಡಿ. ಬಳಿಕ ಸ್ಕ್ರಾಲ್ ಮಾಡಿದರೆ ಕೆಳಗಡೆ ನೆಕ್ಸ್ಟ್ ಸ್ಟೆಪ್ ಮತ್ತೊಂದು ಎನ್ನುವ ಆಯ್ಕೆ ಕಾಣುತ್ತದೆ.

ಅದನ್ನು ಕ್ಲಿಕ್ಕಿಸಿದರೆ ತಾನಾಗಿಯೇ 'ಚೂಸ್ ಫೈಲ್ ಟೈಪ್, ಫ್ರೀಕ್ವೆನ್ಸಿ ಮತ್ತು ಡೆಸ್ಟಿನೇಷನ್' ಆಯ್ಕೆ ತೆರೆದುಕೊಳ್ಳುತ್ತದೆ. ಅದರಡಿ ಡೆಸ್ಟಿನೇಷನ್, ಫ್ರೀಕ್ವೆನ್ಸಿ ಮತ್ತು ಫೈಲ್ ಟೈಪ್ ಆ್ಯಂಡ್ ಸೈಜ್ ಉಪ ಆಯ್ಕೆಗಳು ಕಾಣುತ್ತವೆ. ಆ ಪೈಕಿ 'ಡೆಸ್ಟಿನೇಷನ್‌ನಲ್ಲಿ ಸೆಂಡ್ ಡೌನ್‌ಲೋಡ್ ಲಿಂಕ್ ವಯಾ ಇಮೇಲ್' ಅನ್ನು ಆಯ್ದುಕೊಳ್ಳಬೇಕು. ನಂತರ 'ಫ್ರೀಕ್ವೆನ್ಸಿಯಡಿ ಎಕ್ಸ್‌ಪೋರ್ಟ್ ಒನ್ಸ್' ಸೆಲೆಕ್ಟ್ ಮಾಡಿ. ಕಡೆಯದಾಗಿ ಕಾಣುವ 'ಫೈಲ್ ಟೈಪ್ ಆ್ಯಂಡ್ ಸೈಜ್' ಆಯ್ಕೆಯಡಿ ಜಿಪ್ ಮಾದರಿಯ ಫೈಲ್ ಟೈಪ್ ಹಾಗೂ 2 ಜಿ.ಬಿ. ಸೈಜ್ ಆಯ್ಕೆ ಮಾಡಬೇಕು.

ನಂತರ ಕ್ರಿಯೇಟ್ ಎಕ್ಸ್‌ಪೋರ್ಟ್ ಮಾಡಿದರೆ ಕೆಲ ಕ್ಷಣಗಳ ಬಳಿಕ ನಿಮ್ಮ ಜಿ ಮೇಲ್ ಖಾತೆಗೆ 2 ಜಿ.ಬಿ. ಗಾತ್ರದ ಬ್ಯಾಕ್‌ಅಪ್ ಫೈಲ್‌ಗಳು ಜಿಪ್ ಫೈಲ್ ಆಗಿ ರವಾನೆಯಾಗುತ್ತವೆ. ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವಾದರೆ ಹಾಗೇ ಜಿ ಮೇಲ್‌ನಲ್ಲೇ ಸಂಗ್ರಹಿಸಿಟ್ಟುಕೊಳ್ಳಬಹುದು. ಜಿಪ್ ಮಾದರಿಯಲ್ಲಿ ಒಮ್ಮೆಗೆ 2 ಜಿ.ಬಿ. ಡಾಟಾವನ್ನಷ್ಟೇ ಎಕ್ಸ್‌ಪೋರ್ಟ್ ಮಾಡಲು ಸಾಧ್ಯ. ಉದಾಹರಣೆಗೆ 14 ಜಿ.ಬಿ. ಬ್ಯಾಕ್‌ಅಪ್ ಸ್ಟೋರೇಜ್ ಇದ್ದರೆ ಅದನ್ನು 2 ಜಿ.ಬಿ. ಗಾತ್ರದ ಏಳು ಫೈಲ್‌ಗಳನ್ನಾಗಿ ರಚಿಸಿ ತಾನಾಗಿಯೇ ಗೂಗಲ್ ಎಕ್ಸ್‌ಪೋರ್ಟ್ ಮಾಡಿ ಒಂದೇ ಮೇಲ್‌ನಡಿ ಶೇಖರಿಸಿ ರವಾನಿಸುತ್ತದೆ.

ಹೀಗೆ ಸಂಗ್ರಹ ಮಾಡಿದ ಬಳಿಕ ಬ್ಯಾಕ್‌ಅಪ್ ಫೈಲ್‌ಗಳನ್ನು ನಿಮ್ಮ ಗೂಗಲ್ ಖಾತೆಗೆ ಹೋಗಿ ಡಿಲೀಟ್ ಮಾಡಿದರೆ ಸ್ಟೋರೇಜ್ ಸಮಸ್ಯೆ ನಿವಾರಣೆಯಾಗುತ್ತದೆ. ಅಗತ್ಯವಿದ್ದಾಗ ಜಿ ಮೇಲ್‌ಗೆ ಬಂದು ಬ್ಯಾಕ್‌ಅಪ್ ಫೈಲ್ ತೆರೆದು ಮಾಹಿತಿ ಬಳಸಿಕೊಳ್ಳಬಹುದು. ■